**ಸಾಕ್ಷಿಯನ್ನು ದಿಃ25.03.2022ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು -ಪ್ರತಿವಾದಿ ಪರ ಶ್ರೀ.ಟಿ.ಎಮ್.ಎಸ್. ವಕೀಲರಿಂದ.**

ನನ್ನ ತಾತ ಜವರೇಗೌಡ ಹಾಗೂ ಅವರ ಸಹೋದರರ ನಡುವೆ ಸುಮಾರು 100 ವರ್ಷಗಳ ವಿಭಾಗ ಆಗಿರುತ್ತದೆ. ವಿಭಾಗದ ನಂತರ ಅವರವರ ಭಾಗದ ಸ್ವತ್ತುಗಳನ್ನು ಅವರೇ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ನನ್ನ ತಾತ ಜವರೇಗೌಡರ ಮಕ್ಕಳ ನಡುವೆಯೂ ಸಹ 1980ರಲ್ಲಿ ವಿಭಾಗ ಆಗಿರುತ್ತದೆ. ಸದರಿ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಗಿ ಸದರಿ ವಿಭಾಗದ ನಕಲು ಪತ್ರ ಹಾಜರುಪಡಿಸಿದ್ದು, ಮೂಲ ಪತ್ರದ ಬಗ್ಗೆ ಕೇಳಿದಾಗ ಸಾಕ್ಷಿದಾರರು ನ್ಯಾಯಾಲಯಕ್ಕೆ ನೀಡಿರುತ್ತೇನೆ ಎಂದರು ಉತ್ತರಿಸಿರುತ್ತಾರೆ. ಸದರಿ ವಿಭಾಗದಂತೆ ದಾವಾ ಸ್ವತ್ತು ನನ್ನ ತಂದೆಯ ಭಾಗಕ್ಕೆ ಬಂದಿರುತ್ತದೆ.

2. ಸಾಕ್ಷಿದಾರರಿಗೆ ಕಡತದಲ್ಲಿನ ಸದರಿ ವಿಭಾಗ ಪತ್ರದ ನಕಲು ಪತ್ರವನ್ನು ತೋರಿಸಿ ದಾವಾ ಸ್ವತ್ತು ಯಾರ ಭಾಗಕ್ಕೂ ಬಂದಿರುವುದಿಲ್ಲ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿದಾರರು ನಮೂದು ಆಗಿರುವುದಿಲ್ಲ ಎಂದು ನುಡಿಯುತ್ತಾ ಮುಂದುವರೆದು ಅವರ ತಾತನ ಹೆಸರಿನಲ್ಲಿದ್ದು, ವಿಭಾಗದ ಸಮಯದಲ್ಲಿ ನಮೂದು ಮಾಡುವುದು ಮರೆತು ಹೋಗಿರುತ್ತದೆ ಎಂದು ನುಡಿದಿರುತ್ತಾರೆ. ನನ್ನ ತಾತ ಜವರೇಗೌಡ ಮತ್ತು ಅವರ ಸಹೋದರರ ನಡುವೆ ವಿಭಾಗದ ಸಮಯದಲ್ಲಿ ಸ್ವತ್ತುಗಳು ಯಾರೇ ಹೆಸರಿನಲ್ಲಿ ಇದ್ದರೂ ಸಹ ಅವುಗಳನ್ನು ಒಟ್ಟುಗೂಡಿಸಿ ಪರಸ್ಪರ ವಿಭಾಗ ಮಾಡಿಕೊಳ್ಳಲಾಯಿತು ಎಂದರೆ ಸಾಕ್ಷಿದಾರರು ಸದರಿ ಸ್ವತ್ತುಗಳು ಲಕ್ಕಣ್ಣಗೌಡನ ಹೆಸರಿನಲ್ಲಿ ಮಾತ್ರ ಇತ್ತು ಎಂದು ನುಡಿದಿರುತ್ತಾರೆ.

3. ಮರಿಯಪ್ಪ ಉರ್ಫ್ ಚಿಕ್ಕಲಕ್ಕೇಗೌಡ ಎಂದರೆ ನನ್ನ ದೊಡ್ಡತಾತನ ಮಗ. ನನ್ನ ಚಿಕ್ಕ ಅಜ್ಜಿ ತಿಬ್ಬಮ್ಮರವರನ್ನು ನೋಡಿರುತ್ತೇನೆ. ಆಡಿಗೌಡನ ಮರಿಯಪ್ಪ ಎಂದರೆ ಯಾರು ಎಂದರೆ ನನಗೆ ತಿಳಿದಿಲ್ಲ, ಪೂರ್ವಕ್ಕೆಃ ಸಾಕಮ್ಮ, ಪಶ್ಚಿಮಕ್ಕೆಃ ಮರಿಯಪ್ಪನ ಮಗ ರಾಮಣ್ಣನ ಮನೆ ಮತ್ತು ನಿವೇಶನ,

ಉತ್ತರಕ್ಕೆಃ ರಸ್ತೆ, ಆನಂತರ ಪ್ರಭಾಕರವರ ಮನೆ, ದಕ್ಷಿಣಕ್ಕೆಃ ನಮ್ಮ ತಾತ ಜವರೇಗೌಡರಿಗೆ ಸೇರಿದ ಸ್ವತ್ತು, ಹಾಗೂ ಹುಚ್ಚಯ್ಯ ಮತ್ತು ಕಾಮಯ್ಯರವರ ಜಮೀನು, ಈ ನಡುವಿನ ಸ್ವತ್ತನ್ನು ನಾನು ನೋಡಿರುತ್ತೇನೆ. ಸದರಿ ಸ್ವತ್ತು ಪಾಳು ಮನೆ ಎಂದರೆ ಸರಿ. ಉತ್ತರಕ್ಕೆ ಇರುವ ಪ್ರಭಾಕರವರ ಸ್ವತ್ತು ಈ ಹಿಂದೆ ತಿಬ್ಬಮ್ಮ ಹಾಗೂ ಮರಿಯಪ್ಪ ಊರ್ಫ್ ಚಿಕ್ಕಲಕ್ಕೇಗೌಡರ ನಡುವೆ ಅದಲು ಬದಲು ಮಾಡಿಕೊಂಡ ಸ್ವತ್ತು ಎಂದರೆ ಅವರ ನಡುವೆ ಏನು ವ್ಯವಹಾರ ಆಗಿದೆ ಎಂದು ನನಗೆ ತಿಳಿದಿಲ್ಲ. ಸದರಿ ಪಾಳು ಮನೆಯ ಉತ್ತರಕ್ಕೆ ಚಿಕ್ಕಲಕ್ಕೇಗೌಡರ ಮರಿಯಪ್ಪನವರ ಭಾಗಕ್ಕೆ ಬಂದ ಸ್ವತ್ತು ಎಂದರೆ ನನಗೆ ತಿಳಿದಿಲ್ಲ. ಸದರಿ ಪಾಳು ಮನೆಯ ಪಶ್ಚಿಮಕ್ಕೆ ಸರ್ವೆ ನಂ.46/16ರ ಸ್ವತ್ತು ಇದೆ ಎಂದರೆ ಸರಿ. ಉತ್ತರಕ್ಕೆ ಸರ್ವೆ ನಂ.13/Aನ ಸ್ವತ್ತು ಬರುತ್ತದೆ.

4. ಸರ್ವೆ ನಂ.46/16 ಮೂಲತಃ ಚಿಕ್ಕಲಕ್ಕೇಗೌಡರ ಮರಿಯಪ್ಪನವರ ಭಾಗಕ್ಕೆ ಬಂದಿರುತ್ತದೆ. ಸದರಿ ಸ್ವತ್ತು ಗೌಡಯ್ಯನ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಸದರಿ ಮರಿಯಪ್ಪನವರು ಸ್ವತ್ತನ್ನು ಅದಲು ಬದಲು ಮಾಡಿಕೊಳ್ಳುವಾಗ ಗೌಡಯ್ಯನ ಹೆಂಡತಿ ತಿಬ್ಬಮ್ಮನವರಿಗೆ ಬಿಟ್ಟುಕೊಟ್ಟರು ಎಂದರೆ ನನಗೆ ತಿಳಿದಿಲ್ಲ. ಸಾಕಮ್ಮನವರ ಜಮೀನು ನೋಡಿದ್ದೇನೆ. ಚೆಕ್ಕುಬಂದಿ ನನಗೆ ಹೇಳಲಾಗುವುದಿಲ್ಲ. ಸದರಿ ಚಿಕ್ಕಲಕ್ಕೇಗೌಡರ ಮಗ ಬ್ಯಾಟೇ ಎಂದರೆ ಯಾರೂ ಇರುವುದಿಲ್ಲ. ಸರ್ವೆ ನಂ.46/16ರ ಚೆಕ್ಕುಬಂದಿ ಪೂರ್ವಕ್ಕೆಃ ನನ್ನ ತಾತ ಜವರೇಗೌಡರ ಸ್ವತ್ತು, ಪಶ್ಚಿಮಕ್ಕೆಃ ಕಾಮಯ್ಯ, ಉತ್ತರಕ್ಕೆಃ ರಸ್ತೆ, ಮತ್ತು ದಕ್ಷಿಣಕ್ಕೆಃ ಲಕ್ಕಪ್ಪನ ಸ್ವತ್ತು ಇರುತ್ತದೆ. ಸದರಿ ಪಾಳು ಮನೆಯಲ್ಲಿ ನನ್ನ ತಾತ ಗೌಡಯ್ಯ ಮತ್ತು ಅವರ ಮಕ್ಕಳು ವಾಸವಿದ್ದರು ಎಂದರೆ ಸರಿಯಲ್ಲ. ನನ್ನ ತಾತ ಜವರೇಗೌಡ ಮತ್ತು ಅವರ ಮಕ್ಕಳು ವಾಸವಿದ್ದರು. ಪಾಳು ಮನೆ ಮೂಲತಃ ಪ್ರತಿವಾದಿಯ ತಂದೆಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ಪಾಳು ಮನೆಯ ಖಾತೆ ನನ್ನ ತಾತನ ಹೆಸರಿಗೆ ಬಂದಿರುವುದಿಲ್ಲ. ನಂತರ ನೊಂದಣಿ ಮೂಲಕ ನನ್ನ ಹೆಸರಿಗೆ ಬಂದಿರುತ್ತದೆ.

5. ತಿಬ್ಬಮ್ಮನಿಗೆ ಬರೆದುಕೊಟ್ಟ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ದಿಃ02.07.1951ರ ಪತ್ರವನ್ನು ತೋರಿಸಿ ಓದಿ ಹೇಳಿದಾಗ ಸಾಕ್ಷಿದಾರರು ಸದರಿ ಪತ್ರವನ್ನು ನೋಡಿರುವುದಿಲ್ಲ ಎದು ಉತ್ತರಿಸಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.